ಇಂದು ದಿಃ**17-10-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ.ವಿ.ಎಂ ವಕೀಲರಿಂದ 4 ಮತ್ತು 5 ನೇ ಪ್ರತಿವಾದಿಗಳ ಪರಃ**

ರಾಜಶೇಖರ ಮನೆಯ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದನು ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಂದೆಯ ನಂತರ ನಾನೇ ಮನೆತನದಲ್ಲಿ ಹಿರಿಯವನು ಎಂದರೆ ಸರಿ. ರಾಜಶೇಖರ ಎಲ್ಲಾ ಮನೆತನದ ವ್ಯವಹಾರ ಅವನೇ ನೋಡುತ್ತಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅವನೇ ಎಲ್ಲಾ ವ್ಯವಹಾರಗಳನ್ನು ನಡೆಸಿಕೊಂಡು ಹೊಗುತ್ತಿದ್ದನು ಎಂದು ಹೇಳುತ್ತಾರೆ. ನಮ್ಮ ಒಟ್ಟು ಕುಟುಂಬದ ಪರವಾಗಿ ಯಾವುದೇ ಆದಾಯ ತೆರಿಗೆ ಕಟ್ಟುತ್ತಿರಲಿಲ್ಲ. ರಾಜಶೇಖರ ಆದಾಯ ತೆರಿಗೆ ಪಾವತಿಸುತ್ತಿದ್ದ ಎಂದರೆ ಸರಿ. ಸಾಕ್ಷಿ ಒಟ್ಟಾಗಿ ಅಂಗಡಿ ನಡೆಸುತ್ತಿದ್ದೇವು ಎಂದು ಹೇಳುತ್ತಾರೆ. ಒಟ್ಟು ಕುಟುಂಬದಲ್ಲಿ ಈ ಅಂಗಡಿ ನಡೆಸುತ್ತಿದ್ದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು, 1 ರಿಂದ 3, 6 ನೇ ಪ್ರತಿವಾದಿ ಎಲ್ಲರೂ ಶೆಡ್ಯೂಲ್ ಬಿ ಐಟಂ ನಂಬರ್ 3 ಆಸ್ತಿಯಲ್ಲಿ ವಾಸ ಇದ್ದೇವೆ ಎಂದರೆ ಸರಿ. ಸಾಕ್ಷಿ 6 ನೇ ಪ್ರತಿವಾದಿ ಹರಿಹರದಲ್ಲಿ ವಾಸ ಇದ್ದಾರೆ ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ ಹರಿಹರದಲ್ಲಿ ವಾಸ ಇರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಮ್ಮ ಎಲ್ಲಾ ಗುರುತಿನ ಚೀಟಿಗಳು ಅಂದರೆ ಆದಾರ್ ಕಾರ್ಡ್, ರೇಷನ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಗಳಲ್ಲಿ ಈ ಐಟಂ ನಂಬರ್ 3 ಆಸ್ತಿಯ ವಿಳಾಸ ಇದೆ ಎಂದರೆ ಸರಿ.

4 ಮತ್ತು 5 ನೇ ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ಯಾವ ಆಸ್ತಿಗಳ

ಬಗ್ಗೆ ತಿಳಿಸಿದ್ದಾರೆ ಎಂದು ಮಾಹಿತಿ ಇದೆ. ತಕರಾರಿನಲ್ಲಿ ತಿಳಿಸಿದ ಬಂಗಾರ ಮತ್ತು ಬೆಳ್ಳಿ ಇಲ್ಲ ಆದರೆ ವಾಹನಗಳು ಇವೆ. ನಮ್ಮ ತಂದೆಯ ಕಾಲದಿಂದಲೂ ನಮ್ಮದು ಗೌಡರ ಮನೆತನ ಎಂದರೆ ಸರಿ. ನನ್ನ ತಂದೆಯ ವ್ಯವಹಾರಗಳು ಬಹಳ ಇದ್ದವು ಎಂದರೆ ಗೊತ್ತಿಲ್ಲ. ಸಾಕ್ಷಿ ಆತ ಸಾಲ ಮಾಡಿದ್ದನು, ನಾವು ತೀರಿಸಿದ್ದೇವೆ ಎಂದು ಹೇಳುತ್ತಾರೆ. ಸಾಲ ತೀರಿಸಿದ ಬಗ್ಗೆ ತೋರಿಸಲು ಮತ್ತು ಸಾಲ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ದಾಖಲೆ ಇವೆ, ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ಪ್ರತಿವಾದ ಪತ್ರದಲ್ಲಿ ತಿಳಿಸಿದ ಬಂಗಾ ಮತ್ತು ಬೆಳ್ಳಿ ನಮ್ಮ ಮನೆಯಲ್ಲಿ ಇದ್ದರೂ 4 ಮತ್ತು 5 ನೇ ಪ್ರತಿವಾದಿಯರಿಗೆ ಕೊಡಬಾರದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶೆಡ್ಯೂಲ್ ಬಿ, ಐಟಂ ನಂಬರ್ 5 ಆಸ್ತಿಯನ್ನು ರಾಜಶೇಖರ ಯಾವ ದಿನಾಂಕ, ತಿಂಗಳು, ಇಸವಿ ಮತ್ತು ಯಾರಿಂದ ಖರೀದಿ ಮಾಡಿದರು ಎಂದರೆ ಸಾಕ್ಷಿ ರೇವಣಸಿದ್ದಪ್ಪ ಎನ್ನುವವರಿಂದ ಖರೀದಿ ಮಾಡಿದ್ದರು, ಎಷ್ಟು ಹಣಕ್ಕೆ ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಆದರೆ ಕೂಡಿದ್ದಾಗ ಖರೀದಿ ಮಾಡಿದ್ದರು. ಶೆಡ್ಯೂಲ್ ಬಿ, ಐಟಂ ನಂಬರ್ 6 ಆಸ್ತಿಯನ್ನು ರಾಜಶೇಖರ ಯಾವಾಗ ಯಾರಿಂದ ಖರೀದಿ ಮಾಡಿದರು ಎಂದು ಗೊತ್ತಿಲ್ಲ. ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ. ಈ ಆಸ್ತಿಯಲ್ಲಿ ಅಂಗಡಿ ಇತ್ತು ಎಂದರೆ ಸರಿ. ಈ ಅಂಗಡಿಯ ಬಗ್ಗೆ ತೋರಿಸಲು, ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ನಾನು ಯಾವುದೇ ಪೋಟೋ ಹಾಜರುಪಡಿಸಿಲ್ಲ. ನಾನು ಈ ದಾವಾ ಆಸ್ತಿಗಳ ಪೋಟೋ ಹಾಜರುಪಡಿಸಿಲ್ಲ. ಸಾಕ್ಷಿಗೆ ಕೆಲವೊಂದು ಪೋಟೋ ತೋರಿಸಿ ಅವುಗಳಲ್ಲಿ ಇರುವ ಮನೆಗಳು ನಮ್ಮವು ಎಂದರೆ ಸರಿಯಲ್ಲ. ಸಾಕ್ಷಿಗೆ 10 ಪೋಟೋಗಳನ್ನು ತೋರಿಸಿ ಅವುಗಳಲ್ಲಿ ಕಾಣುವ ವ್ಯಕ್ತಿ ನಾನೇ ಎಂದರೆ ಸರಿ.

ಅದರಲ್ಲಿ ಇರುವ ಟ್ರ್ಯಾಕ್ಟರ್ ನನಗೆ ಸೇರಿದ್ದು ಎಂದರೆ ಸರಿ. ಸದರಿ ಫೋಟೋಗಳನ್ನು ಒಟ್ಟಿಗೆ ನಿ.ಡಿ-1 ಎಂದು ಗುರುತಿಸಲಾಯಿತು. ಶೆಡ್ಯೂಲ್ ಬಿ ಯ ಐಟಂ ನಂಬರ್ 4 ರಿಂದ 6 ಆಸ್ತಿಗಳನ್ನು ಒಟ್ಟಿಗೆ ಖರೀದಿ ಮಾಡಿದ ಬಗ್ಗೆ ತೋರಿಸಲು ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಒಟ್ಟು ಕುಟುಬಂದ ಆದಾಯವನ್ನು ರಾಜಶೇಖರ ಇವನಿಗೆ ಕೊಟ್ಟಿದ್ದೇವು, ಅವನ ಹೆಸರಿನಲ್ಲಿ ಖರೀದಿ ಆಗಿವೆ ಎಂದು ಹೇಳುತ್ತಾರೆ. ಹಣಕೊಟ್ಟ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಒಟ್ಟು ಕುಟುಂಬದಲ್ಲಿ ಈ ಅಂಗಡಿಗಳನ್ನು ನಡೆಸುತ್ತಿದ್ದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಅಂಗಡಿಗಳ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಬೈಕ್ ಸಂಖ್ಯೆ ಕೆ.ಎ-27-2391 ಇದು ರಾಜಶೇಖರನ ಹೆಸರಿಗೆ ಇದೆ ಎಂದರೆ ಸರಿ. ಈ ಬೈಕ್ ನ್ನು ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಒಟ್ಟು ಕುಟುಂಬಕ್ಕೆ ಸೇರಿದ ಬ್ಯಾಂಕ್ ಪಾಸ್ ಬುಕ್ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎಂದು ಹೇಳುತ್ತಾರೆ. 5-6 ಹೈನುಗಳು ಇವೆ ಎಂದರೆ ಸರಿ. ಮೊದಲು ಹಿಟ್ಟಿನ ಗಿರಣಿ ಇತ್ತು ಎಂದರೆ ಸರಿ. ಸಾಕ್ಷಿ ಗುಜರಿ ಆಗಿದೆ ಎಂದು ಹೇಳುತ್ತಾರೆ. ಮನೆತನಕ್ಕೆ ಇರುವ ವಾಹನಗಳ ಬಗ್ಗೆ, ಹೈನುಗಳ ಬಗ್ಗೆ ನನಗೆ ವಾದಪತ್ರದಲ್ಲಿ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

ಹೈನುಗಾರಿಕೆಯಿಂದ ಬಂದ ಹಣ ಅಥವಾ ಕೃಷಿ ಆದಾಯಿಂದ ಬಂದ ಹಣದಲ್ಲಿ 4 ಮತ್ತು 5 ನೇ ಪ್ರತಿವಾದಿಯರಿಗೆ ಏನಾದರೂ ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ, ಆದರೆ ದಾಖಲೆ ಇಲ್ಲ ಎಂದು ಹೇಳುತ್ತಾರೆ. ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಈ ವಿಷಯ ಬರೆಯಿಸಿದ್ದೀರಾ ಎಂದರೆ ಸಾಕ್ಷಿ ಈ ವಿಷಯ ಬರೆಯಿಸಲು ಆಗುವುದಿಲ್ಲ, ಆದರೆ ನಮ್ಮ ತಮ್ಮ

ತೀರಿಕೊಂಡ ನಂತರ 4 ಮತ್ತು 5 ನೇ ಪ್ರತಿವಾದಿಯರಿಗೆ ನಾನೇ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದೆನು ಎಂದು ಹೇಳುತ್ತಾರೆ. ವಾದಪತ್ರದಲ್ಲಿ ನಾನು ಅವರಿಗೆ ಹಣಕೊಟ್ಟ ಬಗ್ಗೆ ಅಥವಾ ಇಂತಿಂತಹ ತಾರೀಖಿನಂದು ಎಂದು ತಿಳಿಸಿಲ್ಲ. ನಾನು ಒಂದು ವರ್ಷ ಮನೆತನದ ಲೆಕ್ಕ ಪತ್ರಗಳನ್ನು ಬರೆದೆನು ನಂತರ ನನಗೆ ಆಗಲಿಲ್ಲ. ನನ್ನ ತಮ್ಮನಿಗೆ ಜವಾಬ್ದಾರಿ ಕೊಟ್ಟೆನು. ಸಾಕ್ಷಿಗೆ ಒಂದು ಲೆಕ್ಕ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ, ಅದರಲ್ಲಿ ಇರುವ ಕೈ ಬಹರ ನನ್ನದು ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಡಿ-2 ಎಂದು ಗುರುತಿಸಲಾಯಿತು.

ಐಟಂ ನಂಬರ್ 1, 3, 4 ರಿಂದ 6 ಇವುಗಳು ಅಡಿಕೆ, ತೆಂಗು ಮತ್ತು ಭತ್ತ ಬೆಳೆಯುವ ಜಮೀನುಗಳು ಎಂದರೆ ಸರಿ. ಒಟ್ಟು 9 ಎಕರೆ ಮುಕ್ಕಾಲು ಗುಂಟೆ ಜಮೀನಿನಲ್ಲಿ 5 ಎಕರೆಯಲ್ಲಿ ಫಲ ಬಿಡುವ ಅಡಿಕೆ, ತೆಂಗಿನ ಮರಗಳು ಇವೆ. ವರ್ಷಕ್ಕೆ ಒಂದು ಬೆಳೆ ಬರುತ್ತದೆ. ಅಡಿಕೆ ಮರ 6 ವರ್ಷ ಆದ ನಂತರ ಫಲಕೊಡುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ 8-10 ವರ್ಷ ಬೇಕು ಎಂದು ಹೇಳುತ್ತಾರೆ. 5 ಎಕರೆ ಅಡಿಕೆ ಬೆಳೆಗೆ ಸುಮಾರು 20 ರಿಂದ 25 ಲಕ್ಷ ಆದಾಯ ವರ್ಷಕೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಹೋದ ಸಲ 7 ಲಕ್ಷ ಸಹ ಆಗಲಿಲ್ಲ ಎಂದು ಹೇಳುತ್ತಾರೆ. 4 ಮತ್ತು 5 ನೇ ಪ್ರತಿವಾದಿಯರಿಗೆ ಆದಾಯ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಸಹ ಜಮೀನು ಮಾಡುತ್ತಿಲ್ಲ ಎಂದು ಹೇಳುತ್ತಾರೆ. ತೆಂಗಿನ ಕಾಯಿಯಿಂದ ವರ್ಷಕ್ಕೆ 5 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ನಮಗೆ ಸಾಕಷ್ಟು ಆದಾಯ ಜಮೀನಿಂದ ಬರುತ್ತಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಮೀನು ಮಾಡುತ್ತಿಲ್ಲ, ಭತ್ತ ಕೊಯಿಯುವ ಮಿಷನ್ ನಿಂದ ಜೀವನ ಮಾಡುತ್ತಿದ್ದೇನೆ. ಮನೆತನದ ಎಲ್ಲಾ ಜವಾಬ್ದಾರಿಯನ್ನು ಈ

ವರೆಗೂ ನಾನೇ ಎಲ್ಲಾ ನೋಡಿಕೊಳ್ಳುತ್ತಿದ್ದರೂ, ಹೆಸರಿಗೆ ಮಾತ್ರ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ರಾಜಶೇಖರ ತನ್ನ ಅಂಗಡಿಯಲ್ಲಿ ಕಂಪ್ಯೂಟರ್ ಮತ್ತು ಪ್ರಿಂಟರ್ ಇಟ್ಟುಕೊಂಡಿದ್ದನು ಎಂದರೆ ಸರಿ. 4 ನೇ ಪ್ರತಿವಾದಿಗೆ ಆಕೆಯ ತಂದೆ ತಾಯಿ ಸಾಕಷ್ಟು ಬಂಗಾರ ಕೊಟ್ಟಿದ್ದರು ಎಂದರೆ ಸಾಕ್ಷಿ ಅತ್ತೆ ಮಗಳು, ಬಂಗಾರ ಕೊಟ್ಟಿದ್ದರು ಎಷ್ಟು ಎಂದು ನಾನು ನೋಡಿಲ್ಲ ಎಂದು ಹೇಳುತ್ತಾರೆ. ರಾಜಶೇಖರ ತೀರಿಕೊಂಡ ನಂತರ ಎರಡು ಅಂಗಡಿಗಳಲ್ಲಿ ಇದ್ದ ಕಂಪ್ಯೂಟರ್, ಪ್ರಿಂಟರ್, ಅಕೌಂಟ್ ಪುಸ್ತಕಗಳು, ರಶೀದಿ ಪುಸ್ತಕಗಳನ್ನು ನಾನು ತೆಗೆದುಕೊಂಡು ಅಂಗಡಿ ಬಂದ್ ಮಾಡಿದೆನು ಎಂದರೆ ಸರಿಯಲ್ಲ. ಅದೇ ರೀತಿ 4 ನೇ ಪ್ರತಿವಾದಿಯ ಬಂಗಾರದ ಒಡುವೆಗಳನ್ನು ಸಹ ತೆಗೆದುಕೊಂಡೆನು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ನಮಗೆ ಮನೆತನದ ಲೆಕ್ಕಗಳ ಬಗ್ಗೆ ಕೇಳಿದ್ದರು ಎಂದರೆ ಸರಿ. ಸಾಕ್ಷಿ 6 ನೇ ಪ್ರತಿವಾದಿಯ ಬಳಿ ಇದೆ, ಆತನಿಂದ ಹೇಳಿಸುತ್ತೇನೆ ಎಂದು ಹೇಳುತ್ತಾರೆ. ಆಕೆಗೆ 6 ನೇ ಪ್ರತಿವಾದಿಗೆ ಲೆಕ್ಕ ಕೇಳು ಎಂದು ನಾನು ನನ್ನ ವಾದಪತ್ರದಲ್ಲಿ ತಿಳಿಸಿಲ್ಲ. 4 ಮತ್ತು 5 ನೇ ಪ್ರತಿವಾದಿಯರಿಗೆ ಹಿಸ್ಸೆಕೊಡಬಾರದು ಎಂದು ನಾನು, 1 ರಿಂದ 3 ಮತ್ತು 6 ನೇ ಪ್ರತಿವಾದಿಯರು ವಾದಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ತಿಳಿಸಿದ ಎಲ್ಲಾ ಆಸ್ತಿಗಳನ್ನು ಅನುಭವಿಸಿಕೊಂಡು ಹೋಗುತ್ತಿದ್ದೇವೆ ಎಂದರೆ ಸರಿಯಲ್ಲ. ಅವರಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರತಿವಾದಿಯರು ನನ್ನನ್ನು ದೂರ ಇಟ್ಟಿದ್ದಾರೆ ಎಂದು ಹೇಳುತ್ತಾರೆ. ಈ ವಿಷಯವನ್ನು ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೇನೆ. 4 ಮತ್ತು 5 ನೇ ಪ್ರತಿವಾದಿಯರಿಗೆ ಏನಾದರೂ ಮೂಲ ಆದಾಯ ಇದೆ ಎಂದರೆ ಸಾಕ್ಷಿ 6 ನೇ ಪ್ರತಿವಾದಿ ಹಣಕೊಡುತ್ತಿದ್ದಾನೆ ಎಂದು ಹೇಳುತ್ತಾರೆ. ಈ ವಿಷಯವನ್ನು ವಾದಪತ್ರದಲ್ಲಿ

ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ.

ಊರಿನಲ್ಲಿ ಭತ್ತದ ಬೆಳೆ ಬಂದರೆ ಭತ್ತ ಕಟ್ಟಿಂಗ್ ಮಿಷನ್ ಗೆ ಸಾಕಷ್ಟು ಬೇಡಿಕೆ ಇರುತ್ತದೆ ಎಂದರೆ ಸರಿ. ಆಗ ನಾನು ಸಾಕಷ್ಟು ಜಮೀನುಗಳಿಗೆ ಮಿಷನ್ ತೆಗೆದುಕುಂಡು ಹೋಗಿರುತ್ತೇನೆ ಎಂದರೆ ಸರಿ. ಸಾಕ್ಷಿ ಹೋಗಿದ್ದೇನೆ ಆದರೆ ನಷ್ಟ ಸಹ ಆಗಿದೆ ಎಂದು ಹೇಳುತ್ತಾರೆ. ನಾನು ನನ್ನ ವಾದಪತ್ರದಲ್ಲಿ ಈ ಭತ್ತ ಕಟ್ಟಿಂಗ್ ಮಿಷನ್ ನಡೆಸುತ್ತಿದ್ದೇನೆ, ಅದರಿಂದ ಇಷ್ಟು ಆದಾಯ ಮತ್ತು ನಷ್ಟ ಇದೆ ಎಂದು ತಿಳಿಸಿಲ್ಲ. 1 ಎಕರೆಗೆ ಸುಮಾರು 2 ಸಾವಿರ ಬಾಡಿಗೆ ಇರುತ್ತದೆ, ಸಾಕ್ಷಿ ಖರ್ಚು ಸಹ ಇರುತ್ತದೆ ಎಂದು ಹೇಳುತ್ತಾರೆ. 12 ತಾಸಿಗೆ ಸುಮಾರು 10 ಎಕರೆ ಭತ್ತ ಕಟ್ಟಿಂಗ್ ಮಾಡಬಹುದು ಎಂದರೆ ಸರಿಯಲ್ಲ. ಈ ಮಿಷನ್ ಇಷ್ಟು ಆದಾಯ ಉಳಿದಿದೆ ಎಂದು ನಾನು ನನ್ನ ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ನಮ್ಮ ಮನೆತನಕ್ಕೆ ವೆಲ್ಡಿಂಗ್ ಗ್ಯಾರೇಜ್ ಇದೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಉಪಯೋಗಕ್ಕೆ ವೆಲ್ಡಿಂಗ್ ಮಿಷನ್ ಇದೆ ಎಂದು ಹೇಳುತ್ತಾರೆ.

ಪ್ರಗತಿ ಕೃಷ್ಣ ಬ್ಯಾಂಕ್, ಬೆಳ್ಳೂಡಿ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಬೆಳ್ಳೂಡಿಯಲ್ಲಿ 4 ನೇ ಪ್ರತಿವಾದಿಯ ಒಡುವೆಗಳನ್ನು ಅಡ ಇಟ್ಟು, ಸಾಲ ಪಡೆದಿದ್ದೇವೆ ಎಂದರೆ ಗೊತ್ತಿಲ್ಲ. ಸಾಕ್ಷಿ ನನ್ನ ತಮ್ಮನಿಗೆ ಗೊತ್ತು ಎಂದು ಹೇಳುತ್ತಾರೆ. ರಾಜಶೇಖರನ ಸದರಿ ಬ್ಯಾಂಕ್ ನ ಖಾತೆ ನಂಬರ್, ಕೊನೆಯ ನಂಬರ್ - 11620 ಇರುತ್ತದೆ ಎಂದರೆ ಗೊತ್ತಿಲ್ಲ. ಪಾಸ್ ಬುಕ್ ಸಹ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಈ ವಿಷಯವನ್ನು ವಾದಪತ್ರದಲ್ಲಿ ತಿಳಿಸಿಲ್ಲ. 1 ರಿಂದ 3 ಮತ್ತು 6 ನೇ ಪ್ರತಿವಾದಿಯರು ಈ ದಾವೆಯಲ್ಲಿ ಯಾವ ವಕೀಲರನ್ನು ನೇಮಿಸಿದ್ದಾರೆ ಎಂದು ಗೊತ್ತಿಲ್ಲ. ಅವರು ಏನು ತಕರಾರು ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ತಿಳಿಸಿದ ಆಸ್ತಿಗಳಲ್ಲಿ 4 ಮತ್ತು 5 ನೇ ಪ್ರತಿವಾದಿಯರಿಗೆ ಸಮನಾದ ಹಿಸ್ಸೆ

ಇದೆ ಎಂದರೆ ಸಾಕ್ಷಿ ಮಾಡಿಕೊಳ್ಳಲಿ, ನನ್ನದು ತಕರಾರು ಇಲ್ಲ ಎಂದು ಹೇಳುತ್ತಾರೆ. ರಾಜಶೇಖರ ನಡೆಸುತ್ತಿದ್ದ ಅಂಗಡಿಯಿಂದ ಸಾಕಷ್ಟು ಆದಾಯ ಆತನಿಗೆ ಬಂದಿದ್ದರೂ ನಾವು ಮನೆತನಕ್ಕೆ ಆ ಆದಾಯ ಬಳಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನೇ ಮನೆತನದ ಯಜಮಾನಿಕೆ ಮಾಡುತ್ತಿದ್ದು, ಈಗ ನನ್ನ ಜವಾಬ್ದಾರಿ ಬರುತ್ತದೆ ಎಂದು ಸತ್ಯ ಸಂಗತಿಗಳನ್ನು ಮುಚ್ಚಿಟ್ಟು, ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಶೇಖರ ತೀರಿಕೊಂಡ ನಂತರ 4 ಮತ್ತು 5 ನೇ ಪ್ರತಿವಾದಿಯರಿಗೆ ಏನಾದರೂ ಅನುಕೂಲ ಮಾಡಿಕೊಡಲು ಊರಿನಲ್ಲಿ ಸಾಕಷ್ಟು ಪಂಚಾಯಿತಿಗಳು ಆದವು ಎಂದರೆ ಸರಿಯಲ್ಲ. ಸಾಕಷ್ಟು ಪಂಚಾಯಿತಿ ಆದರೂ ನಾವು ಯಾರೂ ಅದಕ್ಕೆ ಒಪ್ಪಲಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮತ್ತು ಆಕೆಯ ತಮ್ಮ, ತಂದೆ ತಾಯಿ ಬಂದು ಆಸ್ತಿ ಕೇಳಿದಾಗ, ಅದರ ಕುರಿತು ತಕರಾರು ಆಗಿ ಕ್ರಿಮೀನಲ್ ಪ್ರಕರಣಗಳು ನಡೆಯುತ್ತಿವೆ ಎಂದರೆ ಸರಿ. ಈ ದಾವೆಗೆ ಯಾವುದೇ ದಾವಾ ಕಾರಣ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ತೊಂದರೆ ಕೊಟ್ಟ ನಂತರ ಹಾಕಿದ್ದೇನೆ ಎಂದು ಹೇಳುತ್ತಾರೆ. ನನಗೆ ತೊಂದರೆ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶೆಡ್ಯೂಲ್ ಬಿ ಯ 4 ರಿಂದ 6 ನೇ ಆಸ್ತಿಗಳು ರಾಜಶೇಖರನ ಸ್ವಂತ ಗಳಿಸಿದ ಆಸ್ತಿಗಳು ಇದ್ದರೂ, ಪಾಲು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳುತ್ತಾರೆ. ರಾಜಶೇಖರ ತೀರಿಕೊಂಡ ನಂತರ ಈ ಆಸ್ತಿಗಳಿಗೆ ನಮ್ಮ ಹೆಸರನ್ನು ದಾಖಲು ಮಾಡಲು ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ 4 ನೇ ಪ್ರತಿವಾದಿ ಮೊದಲೇ ಅರ್ಜಿ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಾನು ನಂತರದಲ್ಲಿ ತಕರಾರು ಅರ್ಜಿ ಸಲ್ಲಿಸಿಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.